ಸಾಕ್ಷಿಯನ್ನು ದಿಃ 09-01-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ</u> **ಶ್ರೀ ವಿ ಸಿ ಎಸ್ ವಕೀಲರಿಂದಃ**

1. ನಾನು ಯಲಬುರ್ಗಾದಲ್ಲಿ ವಾಸ ಮಾಡುತ್ತೇನೆ. ನನ್ನನ್ನು ಸಂಗನಾಳಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಮದುವೆಯು ಅಂದಾಜು 45 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಮದುವೆಯಾದಗ ಅಂದಾಜು ನನಗೆ 25 ವರ್ಷ ವಯಸ್ಸಿತ್ತು. ನನ್ನ ತಂದೆಯ ಹೆಸರು ಯಲ್ಲಪ್ಪ ಎಂದರೆ ಸರಿ. ಯಲ್ಲಪ್ಪನಿಗೆ ನಾವು 4 ಜನ ಹೆಣ್ಣು ಮಕ್ಕಳು ಒಬ್ಬನು ಗಂಡು ಮಗನು ಇದ್ದನು. 5 ಜನ ಮಕ್ಕಳಲ್ಲಿ ಬಸವಣ್ಣೆಪ್ಪನು ದೊಡ್ಡವನು ಎಂದರೆ ಸರಿ. ನಮ್ಮ ನಾಲ್ಕು ಸಹೋದರಿಯರ ಮದುವೆಯನ್ನು ನಮ್ಮ ತಾಯಿ ಮಾಡಿರುತ್ತಾರೆ. ಹೊಲ-ಮನೆ ವ್ಯವಹಾರವನ್ನು ಬಸವಣ್ಣೆಪ್ಪನ್ನು ಮಾಡುತ್ತಿದ್ದನು ಎಂದರೆ ಸರಿಯಲ್ಲ. ನಾವು ಮಾಡುತ್ತಿದ್ದೇವು. ದಾವಾ ಶೆಡ್ಯೂಲ್ -1(ಎ) ದಿಂದ 1(ಸಿ) ಆಸ್ತಿಯು ಮೊದಲು 11 ಎಕರೆ 10 ಗುಂಟೆ ಇತ್ತು ಎಂದರೆ ಸರಿ. ಸದರಿ ಆಸ್ತಿಗೆ ರಿ.ಸ.ನಂ. 719/1 ಇತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ತಾಯಿಗೆ ನನ್ನ ತಂದೆಯು ಬಿಟ್ಟುಕೊಟ್ಟಿರುತ್ತಾರೆ. ನನ್ನ ತಂದೆ ಯಲ್ಲಪ್ಪನು ನನ್ನ ತಾಯಿಯನ್ನು ಮದುವೆಯಾಗುವ ಮೊದಲು ರಿ.ಸ.ನಂ. 719/1 ನ್ನು ಬಿಟ್ಟು ಕೊಟ್ಟ ನಂತರ ನನ್ನ ತಂದೆ ಹಾಗೂ ತಾಯಿಯ ಮದುವೆಯಾಗಿರುತ್ತದೆ ಎಂದರೆ ಸರಿ. ರಿ.ಸ.ನಂ. 719/1 ನ್ನು ನನ್ನ ತಂದೆಯು ಸ್ವಂತ ಗಳಿಸಿದ ಆಸ್ತಿ ಇರುತ್ತದೆ ಎಂದರೆ ಸರಿ. ಅದು ಅವರ ಪೂರ್ವಿಜಿ ಆಸ್ತಿ ಇರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ತನ್ನ ಜೀವಿತಾವಧಿಯಲ್ಲಿ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಬಸವಣ್ಣೆಪ್ಪನಿಗೆ ರಿ.ಸ.ನಂ. 719/1 ನ್ನು 1978 ರಲ್ಲಿ ಎಂದರೆ 45 ವರ್ಷಗಳ ಹಿಂದೆ ನನ್ನ ತಾಯಿಯು ವರದಿ ಪ್ರಕಾರ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ನಾವು ಬಸಣ್ಣೆಪ್ಪನ ಮೊದಲನೇ ಮದುವೆಯಯನ್ನು ಎಲ್ಲರು ಸೇರಿ ಮಾಡಿದ್ದೇವು 2 ನೇ ಮದುವೆಯನ್ನು ಮಾಡಿಲ್ಲ. ಬಸವಣ್ಣೆಪ್ಪನು 2 ನೇ ಮದುವೆಯನ್ನು ಏಕೆ ಆದನು ಎಂದರೆ ನನಗೆ ಗೊತ್ತಿಲ್ಲ. ಬಸವಣ್ಣೆಪ್ಪನ ಮೊದಲನೇಯ ಹೆಂಡತಿ ಗಂಗವ್ವಳು ಗಂಡು ಮಗನಿಗೆ ಜನ್ಮ ಕೊಟ್ಟ 2 ಗಂಟೆಯೊಳಗಡೆ ಮೃತ ಪಟ್ಟಿದ್ದರಿಂದ ಬಸವಣ್ಣೆಪ್ಪನು ಎರಡನೇ ಮದುವೆ ಆದನು ಎಂದರೆ ನನಗೆ ಗೊತ್ತಿಲ್ಲ. ಬಸವಣ್ಣೆಪ್ಪನು 2 ನೇ ಮದುವೆಯಾದಲ್ಲಿ ತನ್ನ

ಮಗನಾದ ಯಲ್ಲಪ್ಪನಿಗೆ ಭವಿಷ್ಯತ್ತಿನಲ್ಲಿ ತೊಂದರೆಯಾಗಬಾರದೆಂದು ಹೇಳಿ ತನ್ನ ತಾಯಿಯಿಂದ ಬಂದ ಆಸ್ತಿಯಲ್ಲಿ 6 ಎಕರೆ ಆಸ್ತಿಯನ್ನು ಯಲ್ಲಪ್ಪನ ಹೆಸರಿನಲ್ಲಿ ಹಸ್ತಾಂತರಿಸಿದನು ಎಂದರೆ ಸರಿ. ಬಸವಣ್ಣೆಪ್ಪನು ತಾಯಿಯ ಬಂದ ಆಸ್ತಿಯಲ್ಲಿ 5 ಎಕರೆ 10 ಗುಂಟೆಯನ್ನು ಉಳಿಸಿಕೊಂಡನು ಎಂದರೆ ಸರಿ. ನನ್ನ ತಂದೆ-ತಾಯಿ, ಬಸವಣ್ಣೆಪ್ಪನ ಜೀವಿತಾವಧಿಯಲ್ಲಿ ನಮಗೆ ಆಸ್ತಿಗಳಲ್ಲಿ ಹಿಸ್ಸೆ ಬೇಕು ಎಂದು ಕೇಳಿಲ್ಲ. ನನ್ನ ತಾಯಿಯು ತನ್ನ ಸ್ವಯಾರ್ಜಿತ ಆಸ್ತಿಯನ್ನು ತನ್ನ ಮಗನಿಗೆ ಬಿಟ್ಟುಕೊಟ್ಟಿದ್ದು ಅದು ಸಹ ಬಸವಣ್ಣೆಪ್ಪನ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ನಮಗೆ ಪಾಲು ಬರುವುದಿಲ್ಲ ಎಂದು ಗೊತ್ತಿರುವುದರಿಂದ ನಾವು ಆಸ್ತಿಯಲ್ಲಿ ಪಾಲನ್ನು ಕೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯ ಹೆಸರಿನಲ್ಲಿ ಇದೆ.

2. ಯಲ್ಲಪ್ಪನು ದೊಡ್ಡವನಾದ ನಂತರ ತನಗೆ ಬಂದ ಆಸ್ತಿಯನ್ನು ತಾನು ಅನುಭವಿಸಿರುತ್ತಾನೆ ಎಂದರೆ ಸರಿ. ಯಲ್ಲಪ್ಪನು ನನ್ನ ತಂಗಿಯ ಬಳಿ ಹಾವಗಿಯಲ್ಲಿ ಇರುತ್ತಿದ್ದನು. ಯಲ್ಲಪ್ಪನು ಹಾವಗಿಯಲ್ಲಿ ವಾಸಿಸುತ್ತಿದ್ದನು ಎಂದು ತೋರಿಸಲು ನಮ್ಮ ಬಳಿ ದಾಖಲೆಗಳು ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಸಿದ ಬಗ್ಗೆ ನನಗೆ ಗೊತ್ತಿಲ್ಲ. ಯಲ್ಲಪ್ಪನ ಆರೋಗ್ಯ ಸ್ಥಿತಿಯು ಚೆನ್ನಾಗಿತ್ತು ಸಾಕ್ಷಿ ಮುಂದುವರೆದು ಅಷ್ಟು ಚೆನ್ನಾಗಿರಲಿಲ್ಲ ಎಂದು ಹೇಳುತ್ತಾರೆ. ಯಲ್ಲಪ್ಪನು 1 ರಿಂದ 4 ನೇ ಪ್ರತಿವಾದಿಯರ ಜೊತೆಗೆ ವಾಸಿಸುತ್ತಿದ್ದನು ಎಂದರೆ ಸರಿಯಲ್ಲ. ನನ್ನ ತಂಗಿ 4 ನೇ ವಾದಿಯ ಜೊತೆಗೆ ವಾಸವಾಗಿದ್ದನು. ಯಲ್ಲಪ್ಪನ ಮರಣಾನಂತರ ಆತನ ಮಲ ತಾಯಿ, ಮಲ ಸಹೋದರ ಹಾಗೂ ಮಲ ಸಹೋದರಿಗೆ ಹೋಗುತ್ತದೆ ಎಂದರೆ ಸರಿಯಲ್ಲ. ನಮಗೆ ಬರುತ್ತದೆ.

3. ದಾವಾ 1-ಡಿ ಆಸ್ತಿಯನ್ನು ನನ್ನ ತಂದೆಯ ಖರೀದಿ ಹಿಡಿದಿದ್ದರು ಎಂದರೆ ಸರಿ. ನನ್ನ ತಂದೆಯು ತಮ್ಮ ಜೀವಿತ ಕಾಲದಲ್ಲಿ ಬಸವಣ್ಣೆಪ್ಪನ ಹೆಸರಿನಲ್ಲಿ ಹಸ್ತಾಂತರಿಸಿದ್ದರು, ತದನಂತರ ಬಸವಣ್ಣೆಪ್ಪನು ಯಲ್ಲಪ್ಪನ ಹೆಸರಿನಲ್ಲಿ ಹಸ್ತಾಂತರಿಸಿದ್ದರು ಎಂದರೆ ಸರಿ. ಬಸವಣ್ಣೆಪ್ಪನ ಮಗ ಯಲ್ಲಪ್ಪ ಮೃತ ಪಟ್ಟ ನಂತರ ಆತನ ವಾರಸುದಾರರಾದ 1 ರಿಂದ 4 ನೇ ಪ್ರತಿವಾದಿಯರ ಹೆಸರು ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಾಡಿಕೊಂಡಿರಬಹುದು.

4. ನಮ್ಮ ಹಾಗೂ 1 ನೇ ಪ್ರತಿವಾದಿಯ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸರಿ. ಯಲ್ಲಪ್ಪನ ಆಸ್ತಿಯು 1 ರಿಂದ 4 ನೇ ಪ್ರತಿವಾದಿಯರಿಗೆ ಹೋಗಿದೆ ಎಂಬ ಹೊಟ್ಟೆ ಕಿಚ್ಚಿನಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸುಳ್ಳು. ನಾವು ಎಲ್ಲ

ಸಹೋದರಿಯರು ನಮ್ಮ ತಾಯಿಯು ಮಾಡಿದ ವರದಿ ಪ್ರಕಾರ ಹಕ್ಕು ಬಿಟ್ಟಿದ್ದನ್ನು ಹಾಗೂ ನಮ್ಮ ಅಣ್ಣನು ಯಲ್ಲಪ್ಪನ ಹೆಸರಿನಲ್ಲಿ ಅರ್ಧ ಹಿಸ್ಸೆಯನ್ನು ಬಿಟ್ಟುಕೊಟ್ಟಿದ್ದನು ಈ ಮೊದಲು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಇದೇ ನ್ಯಾಯಾಲಯದಲ್ಲಿ ಪ್ರಸ್ತುತ ವ್ಯಾಜ್ಯವನ್ನು ಸಲ್ಲಿಸಿರುತ್ತೇವೆ. ದಾವಾ 1-ಎ ದಿಂದ 1-ಡಿ ಆಸ್ತಿಗಳು ಬಸವಣ್ಣೆಪ್ಪನು ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ ನಾವು ವಾದಿಯರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯ ಆಸ್ತಿಯನ್ನು ನಾವು ಕೇಳುತ್ತಿದ್ದೇವೆ. ಯಲ್ಲಪ್ಪನಿಗೆ ಹುಷಾರು ಇರದೇ ಇರುವುದರಿಂದ 11 ಎಕರೆಯಲ್ಲಿ 2 ಎಕರೆಯನ್ನು 1 ರಿಂದ 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ದಾವಾ ಶೆಡ್ಯೂಲ್-1-ಸಿ ಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಮಾಡಿರುವುದಿಲ್ಲ. 2 ಎಕರೆಯಿಂದ ಬಂದ ಖರೀದಿ ದುಡ್ಡಿನಿಂದ ಯಲ್ಲಪ್ಪನ ಚಿಕತ್ಸೆಯನ್ನು ಮಾಡಿಸಲಾಯಿತು ಎಂದರೆ ಸುಳ್ಳು. ನಾವು ಚಿಕತ್ಸೆಯನ್ನು ಕೊಟ್ಟಿರುತ್ತೇವೆ. ಖರೀದಿ ಹಿಡಿದಾಗಿನಿಂದಲೂ 5 ನೇ ಪ್ರತಿವಾದಿಯು ದಾವಾ ಆಸ್ತಿ ಶೆಡ್ಯೂಲ್ -1-ಸಿಯ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ಉಳಿದ 9 ಎಕರೆಯ ಕಬ್ಜೆಯು 1 ರಿಂದ 4 ನೇ ಪ್ರತಿವಾದಿಯರ ಬಳಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 4 ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂದು ಸುಳ್ಳು ವ್ಯಾಜ್ಯವನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲುಃ ವಿ ಎಮ್ ಹೆಚ್ ವಕೀಲರಿಂದ**

5 ನೇ ಪ್ರತಿವಾದಿ ನನಗೆ ಪರಿಚಯವಿಲ್ಲ. 5 ನೇ ಪ್ರತಿವಾದಿಯು ಕುರ್ತಕೋಟಿ ಗ್ರಾಮದವರು ಎಂದರೆ ಇರಬಹುದು. ದಾವಾ ಆಸ್ತಿ 1-ಸಿ ಯಲ್ಲಪ್ಪನ ಜೀವಿತ ಕಾಲದಲ್ಲಿ ಮಾರಾಟಕ್ಕೆ ಹಚ್ಚಿದರು ಎಂದರೆ ಸರಿಯಲ್ಲ. ಯಲ್ಲಪ್ಪ @ ರಾಜು ಹಾಗೂ 1 ರಿಂದ 4 ನೇ ಪ್ರತಿವಾದಿಯರಿಗೆ ಹಣದ ಅವಶ್ಯಕತೆ ಇರುವುದರಿಂದ ದಾವಾ 1-ಸಿ ಆಸ್ತಿಯನ್ನು ಮಾರಾಟಕ್ಕೆ ಹಚ್ಚಿದ್ದರು ಎಂದರೆ ಸರಿಯಲ್ಲ. ಯಲ್ಲಪ್ಪ ಹಾಗೂ 1 ರಿಂದ 4 ನೇ ಪ್ರತಿವಾದಿಯರು ಸೇರಿ 5 ನೇ ಪ್ರತಿವಾದಿಗೆ ದಾವಾ ಆಸ್ತಿ 1-ಸಿ ಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಕಾಲಕ್ಕೆ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಸ್ವಯಾರ್ಜಿತ ಆಸ್ತಿ ಇರುವುದರಿಂದ ದಾವಾ 1-ಸಿ ಆಸ್ತಿಯನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಹಿಡಿದಾಗಿನಿಂದಲೂ ಇಲ್ಲಿಯವರೆಗೆ 5 ನೇ ಪ್ರತಿವಾದಿಯು ದಾವಾ 1-ಸಿ ಆಸ್ತಿಯ ಕಬ್ಜೆಯಲ್ಲಿ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ.

ಎಲ್ಲ ವಿಷಯಗಳು ಗೊತ್ತಿದ್ದರೂ ಸಹ ಸುಳ್ಳು ವ್ಯಾಜ್ಯವನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇರದೇ ಇದ್ದರೂ ಸಹ ದುರುದ್ದೇಶ ಪೂರ್ವಕವಾಗಿ ಸುಳ್ಳು ವ್ಯಾಜ್ಯವನ್ನು ಸಲ್ಲಿಸಿರುತ್ತೇವೆ ಎಂದರೆ ಸುಳ್ಳು.

6. ವಿ ಎಮ್ ಹೆಚ್ ರವರು ವಿ ಸಿ ಎಸ್ ರವರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.

ಸಾಕ್ಷಿಯನ್ನು ದಿಃ 09-01-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಎಮ್ ಹೆಚ್ ವಕೀಲರಿಂದಃ**

ನಾನು ಈಗ ಕುರ್ತಕೋಟಿಯಲ್ಲಿ ಕಳೆದ 9 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. 5 ನೇ ಪ್ರತಿವಾದಿಯು ಕುರ್ತಕೋಟಿ ಗ್ರಾಮದ ನಿವಾಸಿ ಎಂದರೆ ಸರಿ. 5 ನೇ ಪ್ರತಿವಾದಿಯು ರಿ.ಸ.ನಂ. 719/1 ಪೈಕಿ 2 ಎಕರೆಯನ್ನು 1 ರಿಂದ 4 ಪ್ರತಿವಾದಿಯರ ಕಡೆಯಿಂದ ಹಾಗೂ ಯಲ್ಲಪ್ಪ @ ರಾಜು ರವರ ಕಡೆಯಿಂದು ಯೋಗ್ಯ ಮಾರುಕಟ್ಟೆ ಬೆಲೆಗೆ ದಾಖಲೆಗಳನ್ನು ಪರಿಶೀಲಿಸಿ ಖರೀದಿ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಮಗೆ ಮೋಸ ಮಾಡಿ ಗೊತ್ತಿಲ್ಲದೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನಗೆ ಖರೀದಿ ವ್ಯವಹಾರದ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. 5 ನೇ ಪ್ರತಿವಾದಿಯು ಕಂದಾಯ ದಾಖಲೆಗಳನ್ನು ಪರಿಶೀಲನೆ ಮಾಡಿ ನನಗೆ ತಿಳಿಸಿ ರಿ.ಸ.ನಂ. 719/1 ಪೈಕಿ 2 ಎಕರೆಯನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ರಿ.ಸ.ನಂ. 719/1 ನನ್ನ ತಂದೆಯು ನನ್ನ ತಾಯಿಗೆ ಬಕ್ಷಿಸ ನ್ನು ಕೊಟ್ಟಿದ್ದು ತದ ನಂತರ ನನ್ನ ತಾಯಿಯು ಬಸವಣ್ಣೆಪ್ಪನಿಗೆ ರಿ.ಸ.ನಂ. 719/1 ನ್ನು ಬಕ್ಷಿಸ ಕೊಟ್ಟಿದ್ದು, ತದ ನಂತರ ಬಸವಣ್ಣೆಪ್ಪನ ಮರಣಾನಂತರ 1 ರಿಂದ 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ಯೋಗ್ಯ ಮಾರುಕಟ್ಟೆ ಬೆಲೆಗೆ ರಿ.ಸ.ನಂ. 719/1 ನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ರೀತಿಯಲ್ಲಿ ನನ್ನ ತಾಯಿಯು ಆಸ್ತಿಯನ್ನು ಯಾರಿಗೂ ಕೊಟ್ಟಿಲ್ಲ. 5 ನೇ ಪ್ರತಿವಾದಿಯು ರಿ.ಸ.ನಂ. 719/1 ನ್ನು ಸದ್ಭಾವನೆಯಿಂದ ಖರೀದಿಸಿದ ವ್ಯಕ್ತಿ ಎಂದರೆ ಸರಿಯಲ್ಲ. ನನಗೆ ಬಹಳ ವರ್ಷಗಳಿಂದ ಎಲ್ಲ ಸಂಗತಿಗಳು ಗೊತ್ತಿದ್ದರು ಸಹ ಇತ್ತಿಚ್ಚೆಗೆ ವಿಷಯ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಗಳಲ್ಲಿ 1/5 ಹಿಸ್ಸೆ ಇದೆ ಎಂದು ಸುಳ್ಳು ಇದೆ ಎಂದು, ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು.

ವಿ ಎಮ್ ಹೆಚ್ ರವರು ವಿ ಸಿ ಎಸ್ ರವರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.